ತೆಗೆದುಕೊಂಡಾಗಿತ್ತು. ಆದ್ದರಿಂದ ನಾನದನ್ನು ಸಪೋರ್ಟ್ ಮಾಡಬೇಕು. ಅಷ್ಟೇ ಅಲ್ಲ ಪ್ರಾಕ್ಟೀಸ್ ಕೂಡ ಮುಂದುವರೆಸಬೇಕು. ಏಕೆಂದರೆ ಅವರಿಗೆ ಬರುವ ಸ್ಟೈಪೆಂಡ್ ಯಾವ ಮೂಲೆಗೂ ಸಾಲುವುದಿಲ್ಲ. ಹಾಗೆ ನಾನು ಮನೆ ನಡೆಸಿದೆ. ಸಣ್ಣ ಮಗುವಿನೊಂದಿಗೆ ಹೋಗಿ ಪ್ರಾಕ್ಟೀಸ್ ಮಾಡಿದೆ. ನಿಜ ಹೇಳಬೇಕೆಂದರೆ ಅದು ನನ್ನ ಜೀವನದ ಅತ್ಯಂತ ಕಷ್ಟಕಾಲ. ಎಲ್ಲ ಸಹಿಸಿಕೊಂಡೆ...'

ಆಕೆ ಮಾತಾಡ್ತಾ ಮಾತಾಡ್ತಾ ಗಟಾಗಟಾ ಕುಡಿಯುವುದನ್ನು ನಾನು ಗಮನಿಸಿದೆ.

ವೈನ್‌ನೊಳಗೆ ಆ ಅವಕಾಶ ಇದೆಯೋ ಅಥವಾ ಆಕೆಯ ಸ್ಪೀಡೇ ಅಷ್ಟೋ.

ಆಕೆ ಮತ್ತೆ ಶುರು ಮಾಡಿದಳು.

'ನನ್ನ ಮನೆಯವರ ಪೀಜಿ ಪೂರ್ತಿಯಾಗೋ ಹೊತ್ತಿಗೆ ಸಿಟಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಪೋರೇಟ್ ಹಾಸ್ಪಿಟಲ್‌ಗಳು ಬಂದು ಬಿದ್ದವು. ವ್ಯಾಪಾರ ಶುರುವಾಯಿತು. ಬಿಗ್ ಇಂಡಸ್ಟ್ರಿ. ಸಂಬಳಕ್ಕೆ ದುಡಿಯಲು ಸ್ಪೆಷಲಿಸ್ಟ್‌ಗಳು ಬೇಕು. ನನ್ನ ಮನೆಯವರು ಸೇರಿಕೊಂಡರು ಅನಸ್ಥಿಸ್ಟ್ ಆಗಿ. ಇನ್ನು ನನ್ನ ಸರದಿ ಬಂತು.

ಅವತ್ತಿಗೆ ಲೇಡಿ ಡಾಕ್ಟರುಗಳಿಗೆ ಲಾಭದಾಯಕವಾದ ಓದು ಯಾವುದೆಂದು ತಿಳಿದುಹೋಗಿತ್ತು. ರೇಡಿಯಾಲಜಿ, ಪೀಡಿಯಾಟ್ರಿಕ್ಸ್, ಗೈನಕಾಲಜಿ. ನಾನೀಗ ಗೈನಕಾಲಜಿ ಓದಬೇಕು. ಆದರೆ ಆ ಕೆಲಸ ಮಾಡಲು ನನಗೆ ಇಷ್ಟವಿತ್ತಾ ಇಲ್ಲವಾ ಅಂತ ಕೇಳಿದರೆ ನೇರವಾದ ಉತ್ತರ ಕೊಡಲಾರೆ. ಫ್ರ್ಯಾಂಕ್ ಆಗಿ ಹೇಳಬೇಕೆಂದರೆ ಎರಡು ಕೆಲಸ ಮಾಡಿದವು. ಒಂದು ಈಗಿರುವ ಅಸಂತೃಪ್ತಿಯೊಂದಿಗೆ ಹೀಗೇ ಕೆಲಸ ಮಾಡುವುದಕ್ಕಿಂತ ಮತ್ತೊಂದಿಷ್ಟು ಓದಿಕೊಂಡು ಮತ್ತಷ್ಟು ಬೆಟರ್ ಆಗಿ ಕೆಲಸ ಮಾಡಬಹುದೇನೋ ಅಂತ ಅಂದುಕೊಂಡುದು. ಮತ್ತೊಂದು ಹೊರಗಿನಿಂದ ಕೆಲಸ ಮಾಡುವ ಕಂಪಲ್ಷನ್ಸ್ ಕೂಡ ನನ್ನನ್ನು ತುಂಬಾ ಪ್ರಭಾವಿಸಿದ್ದು.

ಯು ನೋ... ಆವಾಗಲೇ ಸಾಫ್ಟ್‌ವೇರ್ ಬೂಮ್ ಪ್ರಾರಂಭವಾಗಿತ್ತು. ಯಾವ ಕಡೆಯಿಂದ ಬಂತೋ ಗೊತ್ತಿಲ್ಲವಾಗಲಿ ಎಲ್ಲ ರಂಗದಲ್ಲೂ ಈಜಿ ಮನಿ ಉಕ್ಕಿ ಹರಿಯತೊಡಗಿತು. ಕಾರುಗಳು, ಸ್ವಂತ ಫ್ಲ್ಯಾಟುಗಳು, ರಿಯಲ್ ಎಸ್ಟೇಟ್‌ಗಳಲ್ಲಿ ಓಪನ್ ಸೈಟುಗಳು... ಜನ ಸ್ಪೀಡಾಗಿ ಓಡತೊಡಗಿದ್ದರು. ಕಣ್ಣು ಮುಚ್ಚಿ ತೆಗೆಯುವುದರೊಳಗೆ ಬೆಳೆದು ನಿಂತಂತೆ ಕಾಣಿಸತೊಡಗಿದರು. ಅದೆಲ್ಲ ನೋಡಿದರೆ ಏನನಿಸುತ್ತದೆ? ಈ ಐದು ಹತ್ತು ರೂಪಾಯಿಗಳ ಫೀಸುಗಳೊಂದಿಗೆ ಹೀಗೇ ಇನ್ನೆಷ್ಟು ಕಾಲ ಅನಿಸುತ್ತದೆ. ಅಥವಾ ಅಂಥದೇ ಭ್ರಾಂತಿ ಕವಿಯುತ್ತದೆ. ನಾವು ಕೂಡ ಮೇಲೆ ಬರಬೇಕು, ಸ್ವಂತಕ್ಕೊಂದು ಒಳ್ಳೆ ಫ್ಲ್ಯಾಟ್ ಕೊಂಡುಕೊಳ್ಳಬೇಕು, ಕಾರು ಖರೀದಿಸಬೇಕು, ಬ್ಯಾಂಕ್ ಬ್ಯಾಲೆನ್ಸ್ ಹೆಚ್ಚಿಸಿಕೊಳ್ಳಬೇಕು, ನಾವು ಪಟ್ಟ ಕಷ್ಟ ನಮ್ಮ ಮಗ ಪಡದಂತೆ ಚೆನ್ನಾಗಿ ಓದಿಸಬೇಕು, ಅವನನ್ನು ನಮಗಿಂತ ದೊಡ್ಡ ಡಾಕ್ಟರನ್ನಾಗಿ ಮಾಡಬೇಕು ಅನಿಸದೆ ಇರುತ್ತಾ?

ಲಾಲಾಪೇಟ್ ಪೇಶಂಟ್ಸ್ ಅನ್ನು ಅವರ ಕರ್ಮ ಅಂತ ಬಿಟ್ಟು ನಾನು ಕೂಡ ರೇಸಿಗಿಳಿದೆ. ಪೀಜಿ ಸೀಟು ಸಿಗೋವರೆಗೆ ಅದೊಂದು ದೊಡ್ಡ ಹಿಂಸೆ. ಅನುಭವಿಸಿದೆ. ಹಗಲು ರಾತ್ರಿ ಕಷ್ಟಪಟ್ಟೆ. ಎರಡು ಸಲ ಟ್ರೈ ಮಾಡಿ ಸಾಧಿಸಿದೆ.

ದಿನಗಳು ಉರುಳಿದವು. ನೌ ವಿ ಆರ್ ಸ್ಪೆಷಲಿಸ್ಟ್ಸ್. ಇಬ್ಬರೂ ಕಾರ್ಪೋರೇಟ್ ಹಾಸ್ಪಿಟಲುಗಳಲ್ಲಿದ್ದೀವಿ. ದಿನಕ್ಕೆ ಹನ್ನೆರಡು ಗಂಟೆ ಕೆಲಸ ಮಾಡ್ತಿದೀವಿ. ಲೋಕಕ್ಕಷ್ಟೇ ಅಲ್ಲ ನಮ್ಮ ಮಗನಿಗೂ ಕೂಡ ಸತ್ತ ಮನುಷ್ಯರಿಗೆ ಸಮಾನವಾಗಿ ಗುಪ್ಪೆ ಗುಪ್ಪೆ ಸಂಪಾದಿಸ್ತಿದೀವಿ. ನಮಗೆ ಕಾರಿದೆ, ಫ್ಲ್ಯಾಟ್ ಇದೆ. ನಮ್ಮ ಮಗನಿಗೆ ನಾವು ಕನಸಿನಲ್ಲಿಯೂ ಊಹಿಸಿರದಂಥ ಭಾರೀ ಸ್ಕೂಲಿದೆ. ಆದರೆ ಇಬ್ಬರಿಗೂ ಅಸಂತೃಪ್ತಿ ಮಾತ್ರ ಹೋಗಿಲ್ಲ.